6) ಕರ್ನಾಟಕ ಲೆದರ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಲಿ; 1998-99

7) ಹಟ್ಟಿ ಗೋಲ್ಡ್ ಮೈನ್ಸ್ ಲಿ; 1998-99

8) ಮೈಸೂರು ಮಿನರಲ್ಸ್ ಲಿ; 1998-99

ಆ) ಆಡಿಟರ್‌ಗಳನ್ನು ನೇಮಕ ಮಾಡಲು ತಡವಾಗಿರುವುದು ಹಾಗೂ ವಾರ್ಷಿಕ ವರದಿಗಳನ್ನು ಭಾಷಾಂತರಿಸಲು ಮತ್ತು ಮುದ್ರಣ ಮಾಡಲು ತೆಗೆದುಕೊಂಡ ಸಮಯದಿಂದ ಬಾಕಿ ಉಳಿದಿವೆ.

ಇ) ಹೌದು

ಗೋವಾ ವಿಮೋಚನಾ ಚಳುವಳಿಗಾರರಿಗೆ ಪಿಂಚಣಿ.

169 (169)

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗಿಗಳಾಗಿದ್ದ ಸ್ವತಂತ್ರ ಹೋರಾಟಗಾರರಿಗೆ ಸರ್ಕಾರ ನೀಡುತ್ತಿದ್ದ ಪಿಂಚಣಿಯನ್ನು ರದ್ದುಪಡಿಸಲಾಗಿದೆಯೇ? ಹಾಗಿದ್ದಲ್ಲಿ ಕಾರಣಗಳೇನು?

ಆ) ಸದರಿ ಪಿಂಚಣಿಯನ್ನು ಸರ್ಕಾರ ಪುನರ್ ನೀಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ಹೌದು. ತಂಡದ ನಾಯಕರಾದ ಶ್ರೀ ಜೆ.ಎಲ್.ರಾಮರೆಡ್ಡಿಯವರೇ ಪ್ರಮಾಣ ಪತ್ರ ನೀಡುವಿಕೆಯಲ್ಲಿ ಅವರ ಸಹಿ ಫೋರ್ಜರಿ ಮಾಡಲಾಗಿದೆಯೆಂದು ಸರ್ಕಾರಕ್ಕೆ ತಿಳಿಸಿದ ಮೇರೆಗೆ ಹಾಗೂ ಅನರ್ಹ ವ್ಯಕ್ತಿಗಳಿಗೆ ಪ್ರಮಾಣ ಪತ್ರ ನೀಡಿದೆಯೆಂದು ವಿಧಾನ ಮಂಡಲದ ಉಭಯ ಸದನಗಳಲ್ಲಿ ವಿವರವಾಗಿ ಚರ್ಚಿಸಿದ ಹಿನ್ನೆಲೆಯಲ್ಲಿ ದಿನಾಂಕ 2-4-1994ರ ಆದೇಶದನ್ವಯ ರದ್ದು ಪಡಿಸಲಾಯಿತು. ಅಲ್ಲದೆ, ಗೋವಾ ಚಳುವಳಿಯಲ್ಲಿ ಭಾಗವಹಿಸಿದವರಿಗೆ ಗೌರವ ಧನ ಮಂಜೂರು ಮಾಡಲು ಯಾವುದೇ ತರಹದ ಅಧಿಕೃತ ಸಾಕ್ಷಾಧಾರಗಳು ಹಾಗೂ ಕಷ್ಟ ಕಾರ್ಪಣ್ಯಗಳನ್ನು (Sufference)

ಅನುಭವಿಸಿದ ಬಗ್ಗೆ ಮರು ರುಜುವಾತು ಮಾಡಲು ದಾಖಲಾತಿಗಳು ಇಲ್ಲದ್ದರಿಂದ ಸದರಿ ಯೋಜನೆಯನ್ನು ದಿನಾಂಕ 19-4-1995ರಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಳ್ಳಲಾಯಿತು.

ಆ) ಇಲ್ಲ

ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಸೀಮೆ ಎಣ್ಣೆ

172 (266)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಒಂದು ರೇಷನ್ ಕಾರ್ಡಿಗೆ ಯಾವ ಪ್ರಮಾಣದಲ್ಲಿ ಸೀಮೆಎಣ್ಣೆ ನೀಡಲಾಗುತ್ತಿದೆ?

ಆ) ಕಳೆದ ಒಂದು ವರ್ಷದಲ್ಲಿ ರಾಜ್ಯಕ್ಕೆ ನೀಡಲಾದ ಸೀಮೆಎಣ್ಣೆ ಎಷ್ಟು ಹಾಗೂ ಎತ್ತುವಳಿಯಾಗುತ್ತಿರುವ ಪ್ರಮಾಣದ ಬಗ್ಗೆ ಜಿಲ್ಲಾವಾರು ವಿವರಗಳನ್ನು ನೀಡುವುದು?

ಇ) ರೇಷನ್ ಕಾರ್ಡು ಒಂದಕ್ಕೆ ಕನಿಷ್ಟ 10 ಲೀಟರ್ ಸೀಮೆಎಣ್ಣೆ ನೀಡಲು ಸರ್ಕಾರ ಕೈಗೊಂಡ ಕ್ರಮವೇನು ಮತ್ತು ಎಂದಿನಿಂದ ಈ ಪ್ರಮಾಣದಲ್ಲಿ ನೀಡಲಾಗುವುದು?

ಈ) ಗ್ರಾಮಾಂತರ ಪ್ರದೇಶದ ಕೆಲವು ಹಳ್ಳಿಗಳಿಗೆ 2 ತಿಂಗಳಿಗೊಮ್ಮೆ ಚಿಮಣಿ ಎಣ್ಣೆ ಸರಬರಾಜು ಆಗುತ್ತಿದ್ದು ಪ್ರತಿ ಕಾರ್ಡ್‌ಗೆ ಕೇವಲ 2 ಲೀಟರ್ ಎಣ್ಣೆ ನೀಡಲಾಗುತ್ತಿದೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ?

ಉ) ಸೀಮೆಎಣ್ಣೆ ವಿತರಣೆಯಲ್ಲಿ ಅವ್ಯವಹಾರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಈ ಬಗ್ಗೆ ಎಷ್ಟು ಪ್ರಕರಣಗಳನ್ನು ದಾಖಲು ಮಾಡಲಾಗಿದೆ?

ಶ್ರೀ ಡಿ.ಬಿ.ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು):

ಅ) ರಾಜ್ಯದಲ್ಲಿ ಒಂದು ರೇಷನ್ ಕಾರ್ಡಿಗೆ ಪ್ರತಿ ತಿಂಗಳು ಸಾರ್ವಜನಿಕ ವಿತರಣಾ